ಕರ್ನಾಟಕ ಸರ್ಕಾರ

ಪರಿಸರ ಅಧ್ಯಯನ

ಅಭ್ಯಾಸಸಹಿತ ಪಠ್ಯಪುಸ್ತಕ

(ಪರಿಷ್ಕೃತ)

ಕನ್ನಡ ಮಾಧ್ಯಮ

1

ಒಂದನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು–85.

ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ಅಧ್ಯಯನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯಪುಸ್ತಕಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಪುಟ್ಟ ಮಕ್ಕಳು ತಮ್ಮ ಶಿಕ್ಷಣದ ಆರಂಭದ ಹಂತದಲ್ಲಿ ಅಂದರೆ 5ನೆಯ ವರ್ಷದಿಂದ 10 ನೆಯ ವಯಸ್ಸಿನವರೆಗೆ ಅವರು ಮುಂದೆ ಜೀವನದಲ್ಲಿ ಕಲಿಯಬೇಕಾದ ಸಕಲ ವಿಷಯಗಳಿಗೆ ಅತ್ಯಾವಶ್ಯಕವಾದ ಮೂಲ ಪರಿಕಲ್ಪನೆಗಳನ್ನು ಹಾಗೂ ಜ್ಞಾನವನ್ನು ಗಳಿಸುತ್ತಾರೆ. ಈ ಪ್ರಕ್ರಿಯೆ ಯೋಜಿತವಾಗಿ ನಡೆದಲ್ಲಿ ಮುಂದೆ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆ ಉತ್ತಮ ರೀತಿಯಲ್ಲಿ ನಡೆಯಲು ಸಹಾಯಕವಾಗುತ್ತದೆ. ಈ ತತ್ವದ ಆಧಾರದ ಮೇಲೆ ಪುಟ್ಟಮಕ್ಕಳಿಗೆ 1 ನೇ ತರಗತಿಯಿಂದ 5 ನೇ ತರಗತಿಯವರೆಗೆ ಅವರ ಮಾತೃಭಾಷೆ, ರಾಜ್ಯಭಾಷೆ ಹಾಗೂ ಪರಿಚಯ ಭಾಷೆಯಾಗಿ ಇಂಗ್ಲಿಷ್, ಗಣಿತ ಮತ್ತು ಪರಿಸರ ಅಧ್ಯಯನ ಎಂಬ ವಿಷಯಗಳು ಇರುತ್ತವೆ.

ಪರಿಸರ ಅಧ್ಯಯನದಲ್ಲಿ ಮಕ್ಕಳು ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿಜ್ಞಾನ, ಸಮಾಜ, ಪರಿಸರದ ಪರಿಚಯ, ಕುಟುಂಬ, ದೇಶ, ತಮ್ಮ ಕರ್ತವ್ಯ ಹಾಗೂ ಹಕ್ಕುಗಳು ಇತ್ಯಾದಿ ವಿಷಯಗಳನ್ನು ಚಟುವಟಿಕೆಗಳ ಮೂಲಕ ತಮ್ಮನ್ನು ತೊಡಗಿಸಿಕೊಂಡು ಕಲಿಯುವ ಪ್ರಯತ್ನ ಮಾಡಲು ಅವಕಾಶ ಕೊಡಲಾಗಿದೆ. ಈ ಹಂತದಲ್ಲಿ ಬೋಧನೆಗಿಂತ ಮಕ್ಕಳು ಸ್ವಂತ ಪ್ರಯತ್ನದಿಂದ ಸಹಪಾಠಿಗಳೊಂದಿಗೆ ಬೆರೆತು, ಚರ್ಚಿಸಿ ಅನುಭವಗಳನ್ನು ಹಂಚಿಕೊಂಡು ಕಲಿಯಲು ಅವಕಾಶ ಮಾಡಿಕೊಡಲಾಗಿದೆ. ಈ ಪಠ್ಯಪುಸ್ತಕಗಳು ಸಚಿತ್ರವರ್ಣರಂಜಕವೂ, ಆಕರ್ಷಕವಾಗಿಯೂ ಇರುವಂತೆ ಮಾಡಲು ಶ್ರದ್ಧಾಪೂರ್ವಕ ಪ್ರಯತ್ನ ಮಾಡಲಾಗಿದೆ. ಶಿಕ್ಷಕರ ಪಾತ್ರ ಮಕ್ಕಳಿಗೆ ಕಲಿಯಲು ಪೂರಕವಾದ ಸನ್ನಿವೇಶಗಳನ್ನು ಒದಗಿಸಿಕೊಟ್ಟು ಮಾರ್ಗದರ್ಶನ ಮಾಡುವುದಾಗಿದೆ. ಕಲಿಕೆಯಲ್ಲಿ ಸಂತಸ, ಯಶಸ್ಸು ಹಾಗೂ ತೃಪ್ತಿಯನ್ನು ತರುವುದೇ ಈ ಪಠ್ಯಪುಸ್ತಕಗಳ ಗುರಿ. ಈ ವಿಚಾರದಲ್ಲಿ ಶಿಕ್ಷಕರ ಪಾತ್ರ ಬಹಳ ಮಹತ್ವದ್ದಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿ ವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಪ್ರೊ. ಜಿ. ಎಸ್. ಮುಡಂಬಡಿತ್ತಾಯ
ಮುಖ್ಯ ಸಂಯೋಜಕರು
ಪಠ್ಯಕ್ರಮ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು

ನಾಗೇಂದ್ರ ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ,
ಬೆಂಗಳೂರು

ಮೊದಲ ಮಾತು

ಇತ್ತೀಚಿನ ಮನುಕುಲದ ಅಭಿವೃದ್ಧಿ, ಸಂಶೋಧನೆ ಮತ್ತು ಮುಂಬರುವ ವರ್ಷಗಳಲ್ಲಿ ಮಾನವರು ಎದುರಿಸಬಹುದಾದ ಅನೇಕ ಹೊಸ ಸವಾಲುಗಳು ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಎನ್.ಸಿ.ಇ.ಆರ್.ಟಿ. (NCERT) ಸಂಸ್ಥೆಯು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (NCF) 2005 ದೇಶದ ಶಾಲಾ ಶಿಕ್ಷಣಕ್ಕೆ ಪಠ್ಯಕ್ರಮ, ಪಠ್ಯಪುಸ್ತಕಗಳು ಮತ್ತು ಬೋಧನಾ ವಿಧಾನಗಳನ್ನು ತಯಾರಿಸಲು ಮಾರ್ಗದರ್ಶಿಯಾಗಿದೆ. ಎನ್.ಸಿ.ಎಫ್ 2005ರ, ಐದು ಮಾರ್ಗದರ್ಶಿ ತತ್ವಗಳನ್ನು ಆಧರಿಸಿ ನಾವು ಕರ್ನಾಟಕ ರಾಜ್ಯದ ತರಗತಿ 1 ಮತ್ತು 2ರ ಪರಿಸರ ಅಧ್ಯಯನ ಪಠ್ಯಪುಸ್ತಕಗಳನ್ನು ರಚಿಸಿದ್ದೇವೆ. ಸಾಮಾನ್ಯ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳ ಚೌಕಟ್ಟುಗಳನ್ನು ಸೇರಿಸಿ ತನ್ಮೂಲಕ ಈ ವಿಷಯಗಳ ಪರಿಕಲ್ಪನೆಗಳನ್ನು ಸಮನ್ವಯಗೊಳಿಸಲು ಇಲ್ಲಿ ಪ್ರಯತ್ನಿಸಿದ್ದೇವೆ. ಶಾಲಾ ಶಿಕ್ಷಣದ ಪ್ರಾರಂಭದಿಂದಲೇ ಮಕ್ಕಳು ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳನ್ನು ಸಮಗ್ರ ದೃಷ್ಟಿಕೋನದಿಂದ ನೋಡಬೇಕೆಂಬುದೇ ಇದರ ಉದ್ದೇಶ. ಕುಟುಂಬ, ಸಸ್ಯ–ಪ್ರಾಣಿಗಳು, ಆಹಾರ, ಆರೋಗ್ಯ, ಹಬ್ಬಗಳು ಇತ್ಯಾದಿ ಹಲವಾರು ವಿಷಯಗಳನ್ನು ಎನ್.ಸಿ.ಎಫ್ 2005ರ ಚೌಕಟ್ಟನ್ನು ಅನುಸರಿಸಿ ಮಕ್ಕಳ ವಯೋಮಿತಿಗನುಗುಣವಾಗಿ ಸರಳವಾಗಿ ನಿರೂಪಿಸಲು ಪ್ರಯತ್ನಿಸಿದ್ದೇವೆ.

ಈ ಪಠ್ಯಪುಸ್ತಕಗಳನ್ನು ರಚಿಸುವಾಗ ಮಕ್ಕಳು ಸಂಬಂಧಗಳನ್ನು ಕಲ್ಪಿಸಿಕೊಳ್ಳಲು ಅನುಕೂಲವಾಗುವಂತೆ ಹಾಗೂ ತನ್ಮೂಲಕ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುವಂತೆ ರಾಜ್ಯದ ಸಾಮಾಜಿಕ, ಆರ್ಥಿಕ, ಪಾರಿಸಾರಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ. ಒಂದು ಮತ್ತು ಎರಡನೆಯ ತರಗತಿಯ ಮಕ್ಕಳು ಶಿಕ್ಷಣ ವ್ಯವಸ್ಥೆಯ ಪ್ರಾರಂಭಿಕ ಹಂತದಲ್ಲಿರುವುದರಿಂದ, ಚಿತ್ರಗಳನ್ನು ಅತಿ ಹೆಚ್ಚಾಗಿ ಬಳಸಿ, ಪರಿಕಲ್ಪನೆಗಳನ್ನು ತಿಳಿಯಪಡಿಸುವ ಪ್ರಯತ್ನವನ್ನು ಮಾಡಿದ್ದೇವೆ. ಮಕ್ಕಳ ಕಲಿಕಾ ಸಾಮರ್ಥ್ಯಗಳು ಹೆಚ್ಚಲು ಪೂರಕವಾಗುವಂತೆ ಅವರ ವಯೋಮಾನವನ್ನು ಗಮನದಲ್ಲಿರಿಸಿ ವೀಕ್ಷಣೆ, ಬಣ್ಣ ತುಂಬುವುದು ಮುಂತಾದ ವಿವಿಧ ರೀತಿಯ ಸರಳ ಚಟುವಟಿಕೆಗಳನ್ನು ಹಾಗೂ ಅಭ್ಯಾಸಗಳನ್ನು ಕೊಟ್ಟಿದ್ದೇವೆ. ಮಕ್ಕಳಲ್ಲಿ ಆಸಕ್ತಿ ಮೂಡಿಸಿ, ಹೆಚ್ಚು ಮಕ್ಕಳು ಕಲಿಕೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದೇ ಇದರ ಗುರಿ. ಇದು ಮಕ್ಕಳ ವಿಚಾರಣಾ ಸಾಮರ್ಥ್ಯವನ್ನು ಉತ್ತೇಜಿಸಬಹುದಾದ ಸಾಧ್ಯತೆಯೂ ಹೆಚ್ಚು. ಪಠ್ಯಪುಸ್ತಕಗಳು ಮಕ್ಕಳ ಸುತ್ತಲ ಪರಿಸರ, ಸ್ಥಳೀಯ ಜ್ಞಾನ ಮುಂತಾದವುಗಳಿಗೆ ಒತ್ತುಕೊಟ್ಟು, ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರಗಳ ಸರಳ ಪರಿಕಲ್ಪನೆಗಳನ್ನು ಮಕ್ಕಳಿಗೆ ಪರಿಚಯಿಸುವಂತೆ ನಿಯೋಜಿಸಲಾಗಿದೆ. ಇದರಿಂದ ಮಕ್ಕಳು ತಾವು ಬದುಕುತ್ತಿರುವ ಪರಿಸರ ಮತ್ತು ಅಲ್ಲಿರುವ ಪ್ರತಿಯೊಂದು ಘಟಕಗಳ ಮಹತ್ವವನ್ನರಿತು ಅವುಗಳನ್ನು ಮೆಚ್ಚಲು, ಪ್ರೀತಿಸಲು ಆರಂಭಿಸುತ್ತಾರೆ ಎನ್ನುವ ನಂಬಿಕೆ ನಮಗಿದೆ. ಇದೇ ಪರಿಸರ ಸಂರಕ್ಷಣೆಯ ಮೊದಲ ಮೆಟ್ಟಿಲಲ್ಲವೆ? ಭಾಷೆಯ ಬಳಕೆ ಮತ್ತು ನಿರೂಪಣೆಯಲ್ಲಿ ನಾವು ಲಿಂಗಭೇದವನ್ನು ಆದಷ್ಟು ಕಡಿಮೆ ಮಾಡಲು ಯತ್ನಿಸಿದ್ದೇವೆ. ಶಿಕ್ಷಕ/ಶಿಕ್ಷಕಿಯರಿಗೆ ಅನುಕೂಲವಾಗುವಂತೆ ಆಯಾ ಪಾಠದಿಂದ ಮಕ್ಕಳು ಬೆಳೆಸಿಕೊಳ್ಳಬೇಕಾದ ಸಾಮರ್ಥ್ಯಗಳನ್ನು ಪಾಠದ ಪ್ರಾರಂಭದಲ್ಲಿ ಕೊಟ್ಟಿದ್ದೇವೆ.

ಈ ಪಠ್ಯಪುಸ್ತಕವನ್ನು ಪರಿಷ್ಕರಿಸಿ ಇನ್ನೂ ಉತ್ತಮಗೊಳಿಸಲು ಶಿಕ್ಷಕ/ಶಿಕ್ಷಕಿಯರಿಂದ, ಪೋಷಕರಿಂದ ಮತ್ತು ಸಾಮಾಜಿಕ ಕಳಕಳಿಯುಳ್ಳ ಜನರಿಂದ ಸಲಹೆ, ಸೂಚನೆಗಳನ್ನು ನಾವು ಸದಾ ಸ್ವಾಗತಿಸುತ್ತೇವೆ.

ಪರಿಸರದ ಬಗ್ಗೆ, ಪರಿಸರದಿಂದ, ಪರಿಸರ (ಸಂರಕ್ಷಣೆ)ಕ್ಕಾಗಿ ನೀಡುವ ಶಿಕ್ಷಣವೇ ಪರಿಸರ ಶಿಕ್ಷಣ.

ಡಾ|| ಆರ್. ಶೈಲಜಾ
ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ.

ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು :

ಡಾ. ಆರ್. ಶೈಲಜಾ, ನಿರ್ದೇಶಕರು, ಪ್ರಾದೇಶಿಕ ಪರಿಸರ ಶಿಕ್ಷಣ ಕೇಂದ್ರ, ದಕ್ಷಿಣ ವಲಯ, 143, ಇನ್ಫಂಟ್ರಿ ರಸ್ತೆ, ಬೆಂಗಳೂರು.

ಸದಸ್ಯರು :

ಶ್ರೀ ಸುಜಯ್ ಸಂದೀಪ್, ಸಹಶಿಕ್ಷಕರು, ಸ.ಹಿ.ಪ್ರಾ ಶಾಲೆ, ನವರತ್ನ ಅಗ್ರಹಾರ, ಬೆಂಗಳೂರು ಉತ್ತರವಲಯ, ಬೆಂಗಳೂರು ಉತ್ತರ ಜಿಲ್ಲೆ.

ಶ್ರೀ ಆನಂದ ಅಜಿಲ, ಮುಖ್ಯಶಿಕ್ಷಕರು, ಸ.ಹಿ.ಪ್ರಾ.ಶಾಲೆ, ನೆಲ್ಯಾಡಿ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

ಶ್ರೀ ಡಿ. ಹೆಚ್. ಲಕ್ಷ್ಮಣಯ್ಯ, ಸ.ಶಿ., ಸ.ಹಿ.ಪ್ರಾ.ಶಾಲೆ, ನಿಟ್ಟೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

ಶ್ರೀ ಕೆ. ಎಲ್, ಶಾನಭಾಗ, ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಕೊಡ್ಲೂಳ, ಭಟ್ಕಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

ಶ್ರೀ ರಾಘವೇಂದ್ರ ಸುಣಗಾರ, ಸ.ಶಿ., ಸ.ಹಿ.ಪ್ರಾ.ಶಾಲೆ, ನಾಗನೂರ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಚಿತ್ರಕಲಾವಿದರು :

ಶ್ರೀ ಪ್ರಕಾಶ್ ತಟ್ಟಿ, ಚಿತ್ರಕಲಾ ಶಿಕ್ಷಕರು, ಯತ್ನಟ್ಟಿರಸ್ತೆ, ವಾಟರ್ ಟ್ಯಾಂಕ್ ಹತ್ತಿರ, ಭಾಗ್ಯನಗರ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಶ್ರೀ ಆನಂದ್ ಕೆ, ಚಿತ್ರಕಲಾ ಶಿಕ್ಷಕರು, ರಾಷ್ಟ್ರೋತ್ಥಾನ ಶಿಕ್ಷಕರ ತರಬೇತಿ ಸಂಸ್ಥೆ, ಹಗರಿಬೊಮ್ಮನಹಳ್ಳಿ, ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಪರಿಶೀಲಕರು :

ಶ್ರೀ ಡಿ. ಆರ್. ಪ್ರಸನ್ನ ಕುಮಾರ್, ಪಾಲಿಸಿ ಪ್ಲಾನಿಂಗ್ ಘಟಕ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

ಮುಖ್ಯ ಸಂಯೋಜಕರು :

ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಸಂಯೋಜಕರು, ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ :

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಶ್ರೀಮತಿ ಸಿ.ನಾಗಮಣಿ, ಉಪ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಕಾರ್ಯಕ್ರಮ ಸಂಯೋಜಕರು :

ಶ್ರೀಮತಿ ಎಸ್.ಎನ್. ಲೀಲಾವತಿ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ 2014-15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016-17 ರ ಬದಲು 2017-18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳುಹಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು **ಡಯಟ್** ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ-ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದ ಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು, ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

ಹೆಚ್.ಎನ್. ಗೋಪಾಲಕೃಷ್ಣ
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–85

ಪ್ರೊ. ಬರಗೂರು ರಾಮಚಂದ್ರಪ್ಪ
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–85

ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

ಸರ್ವಾಧ್ಯಕ್ಷರು :

ಪ್ರೊ. ಬರಗೂರು ರಾಮಚಂದ್ರಪ್ಪ, ರಾಜ್ಯಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಪರಿಷ್ಕರಣ ಸಮಿತಿ

ಅಧ್ಯಕ್ಷರು :

ಡಾ. ಎಸ್. ಶಿಶುಪಾಲ, ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

ಸದಸ್ಯರು :

ಶ್ರೀಮತಿ ಕೆ. ಮಮತ, ಸ.ಶಿ, ಸರ್ಕಾರಿ ಪ್ರೌಢಶಾಲೆ, ಕೆಂಗೇರಿ ಉಪನಗರ, ಬೆಂಗಳೂರು.

ಶ್ರೀ ಕೆ.ಎಸ್. ಗಿರೀಶ್, ಸ.ಶಿ, ಸರ್ಕಾರಿ ಪ್ರೌಢಶಾಲೆ, ಜಾಲಿಗೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಶ್ರೀಮತಿ ಜಿ. ರೇಣುಕಾ, ಸ.ಶಿ, ಸರ್ಕಾರಿ ಪ್ರೌಢಶಾಲೆ, ಹೊನ್ನಶೆಟ್ಟಿಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

ಶ್ರೀಮತಿ ಆರ್.ಎನ್. ವಸಂತ ಸುಜಯ್, ಸ.ಶಿ, ಸರ್ಕಾರಿ ಪ್ರೌಢಶಾಲೆ, ಹೆಬ್ಬಾಳ, ಬೆಂಗಳೂರು.

ಶ್ರೀಮತಿ ಎ. ಲಕ್ಷ್ಮೀದೇವಿ, ಸ.ಶಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾವೇರಿಪುರ, ಬೆಂಗಳೂರು.

ಶ್ರೀಮತಿ ಬಿ. ಹೇಮಲತ, ಸ.ಶಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೆ.ನಾರಾಯಣಪುರ, ಬೆಂಗಳೂರು.

ಕಲಾವಿದರು :

ಶ್ರೀ ಯು. ಹಜರತ್ ಅಲಿ, ಅಧ್ಯಾಪಕರು, ಲಲಿತಕಲಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

ಉನ್ನತ ಪರಿಶೀಲನ ಸಮಿತಿ

ಡಾ. ಟಿ.ಆರ್. ಅನಂತರಾಮು, ಹಿರಿಯ ವಿಜ್ಞಾನಿ (ನಿವೃತ್ತ), ಭಾರತೀಯ ಭೂ ವೈಜ್ಞಾನಿಕ ಸರ್ವೇ ಸಂಸ್ಥೆ, ಬೆಂಗಳೂರು.

ಪ್ರೊ. ವಿ.ಎಸ್. ವತ್ಸಲ, ಪ್ರಾಂಶುಪಾಲರು (ನಿವೃತ್ತ), ಎಮ್.ಇ.ಎಸ್ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಡಾ. ಜಿ.ಎಮ್. ನಿಜಗುಣ, ಪ್ರಾಂಶುಪಾಲರು (ನಿವೃತ್ತ), ವಿಜಯ ಕಾಲೇಜು, ಬಸವನಗುಡಿ, ಬೆಂಗಳೂರು.

ಪ್ರೊ. ಕೆ.ಎಸ್. ನಟರಾಜ್, ಭೌತವಿಜ್ಞಾನ ಪ್ರಾಧ್ಯಾಪಕರು (ನಿವೃತ್ತ), ನ್ಯಾಷನಲ್ ಕಾಲೇಜು, ಜಯನಗರ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ :

ಶ್ರೀ ಹೆಚ್.ಎನ್ ಗೋಪಾಲಕೃಷ್ಣ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಶ್ರೀ ಕೆ.ಜಿ. ರಂಗಯ್ಯ, ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು.

ಕಾರ್ಯಕ್ರಮ ಸಂಯೋಜಕರು :

ಶ್ರೀಮತಿ ಎನ್.ಆರ್. ಶೈಲಜ ಕುಮಾರಿ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.


ಪರಿವಿಡಿ

ಪಾಠ – 1

ನಮ್ಮ ಸುತ್ತಲಿನ ಪ್ರಾಣಿಗಳು

ಈ ಪಾಠವನ್ನು ಕಲಿತ ನಂತರ ನೀನು,


- ನಿನ್ನ ಸುತ್ತಲೂ ಇರುವ ಸಾಮಾನ್ಯ ಪ್ರಾಣಿಗಳನ್ನು ಗುರುತಿಸುವೆ.



ಚಿತ್ರದಲ್ಲಿ ಕಂಡುಬರುವ ಪ್ರಾಣಿಗಳನ್ನು ನೀನು ನೋಡಿದ್ದರೆ ಚೌಕದಲ್ಲಿ (✓) ಗುರುತು ಹಾಕು.

ನಿನ್ನ ಊರಿನಲ್ಲಿ ಈ ಪ್ರಾಣಿಗಳು ಕಂಡು ಬರುತ್ತವೆಯೆ? ಹೌದಾದರೆ (✓) ಗುರುತು ಹಾಕು.

 ☐  ☐

 ☐  ☐

 ☐  ☐


 ☐  ☐

ನಿನ್ನ ಊರಿನಲ್ಲಿ ಕಂಡು ಬರುವ ಪ್ರಾಣಿಗಳ ಹೆಸರು ಹೇಳು.

ಇವು ಯಾವುವು? ಹೇಳು.














ಈ ಕೆಳಗೆ ಕೊಟ್ಟಿರುವ ಪ್ರಾಣಿಗಳ ಮುಖದ ಚಿತ್ರಗಳನ್ನು ಆಯಾ ಪ್ರಾಣಿಯ ದೇಹದ ಭಾಗಕ್ಕೆ ಗೆರೆ ಎಳೆದು ಹೊಂದಿಸು. ಆ ಪ್ರಾಣಿಯ ಹೆಸರನ್ನು ಹೇಳು. ಒಂದು ಮಾದರಿಯನ್ನು ಇಲ್ಲಿ ತೋರಿಸಿದೆ.




ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ನೋಡಿ, ಪ್ರಾಣಿಗಳ ಹೆಸರು ಹೇಳು. ನಿನ್ನ ಮನೆಯಲ್ಲಿ ಕಂಡುಬರುವ ಪ್ರಾಣಿಗಳ ಸುತ್ತ ವೃತ್ತ ಹಾಕು. ಮಾದರಿಯನ್ನು ನೋಡು.






ಹಾಡಿ ನಲಿ




ನಾಯಿಯ ಬೌಬೌ


ಬೆಕ್ಕಿನ ಮಿಯಾವ್




ಕೋಳಿಯ ಕೂಗದು ಕೊ ಕ್ಕೊ ಕ್ಕೋ



ಕಪ್ಪೆಯ ವಟರು




ಟಗರಿನ ಗುಟುರು



ಬಾತಿನ ಮಾತದು ಕ್ವಾಕ್ ಕ್ವಾಕ್ ಕ್ವಾಕ್



ಸಿಂಹದ ಘರ್ಜನೆ



ಆನೆಯ ಘೀಳು



ಹಾವಿನ ಸದ್ದದು ಬುಸ್ ಬುಸ್ ಬುಸ್





ಕರುಗಳ ಅಂಬಾ ಹಟ್ಟಿಯ ತುಂಬಾ



ಗುಬ್ಬಿಯು ಉಲಿದಿದೆ ಚಿಂವ್ ಚಿಂವ್ ಚಿಂವ್

ಕೊಟ್ಟಿರುವ ಚಿತ್ರಗಳಿಗೆ ಬಣ್ಣ ಹಾಕು.









ಹಾಡಿ ನಲಿ

ಗೇರ್ ಗೇರ್ ಮಂಗಣ್ಣ
ಬಾಳೆ ಹಣ್ಣು ನುಂಗಣ್ಣ

ಮಿಯಾವ್ ಮಿಯಾವ್ ಬೆಕ್ಕೆ
ಕದ್ದು ಹಾಲು ನೆಕ್ಕೆ

ಬೌಬೌ ನಾಯಿ
ಮನೆ ಬಾಗಿಲು ಕಾಯಿ

ಕಾವ್ ಕಾವ್ ಕಾಗೆ
ಹಾರುತ ಮುಂದಕೆ ಸಾಗೆ

ಈ ಕೆಳಗಿನ ಪ್ರಾಣಿಗಳ ಚಲನೆಯನ್ನು ಅನುಕರಿಸು.

ಹಸು, ಕಾಗೆ, ಕಪ್ಪೆ, ಹಾವು, ಮೊಲ

ಆಟ ಆಡು

ನೀನು ನಿನ್ನ ಗೆಳೆಯರು ಸೇರಿ ಈ ಆಟ ಆಡಿ.

ಎರಡು ಗುಂಪು ಮಾಡಿಕೊಳ್ಳಬೇಕು, ಒಂದು ಗುಂಪಿನವರು ಯಾವುದೇ ಪ್ರಾಣಿಯ ಕೂಗನ್ನು ಕೂಗಲಿ, ಇನ್ನೊಂದು ಗುಂಪು ಆ ಪ್ರಾಣಿಯ ಹೆಸರನ್ನು ಹೇಳಲಿ. ಹೀಗೆ ಆಟ ಮುಂದುವರೆಯಲಿ.

ಪಾಠ – 2

ಸುತ್ತಲ ಸಸ್ಯಗಳು


ಈ ಪಾಠವನ್ನು ಕಲಿತ ನಂತರ ನೀನು,

- ನಿನ್ನ ಸುತ್ತಲೂ ಇರುವ ಸಾಮಾನ್ಯ ಸಸ್ಯಗಳನ್ನು ಗುರುತಿಸುವೆ.

ಈ ಸಸ್ಯಗಳು ಯಾವುವು? ಹೇಳು.





ಈ ಚಿತ್ರಗಳಲ್ಲಿ ಕಾಣುವ ಸಸ್ಯಗಳು ನಿನ್ನ ಊರಿನಲ್ಲಿವೆಯೆ? ಹೌದಾದರೆ (✓) ಗುರುತು ಹಾಕು.





ನೀನು ನೋಡಿರುವ ಗಿಡ, ಮರಗಳ ಬಗ್ಗೆ ಗೆಳೆಯರಿಗೆ ಹೇಳು.


ಈ ಚಿತ್ರಗಳಿಗೆ ಬಣ್ಣ ಹಾಕು, ಹೆಸರು ಹೇಳು.

















ಈ ಚಿತ್ರಗಳನ್ನು ಗೆರೆ ಎಳೆದು ಹೊಂದಿಸು.

ಈ ಸಸ್ಯಗಳನ್ನು ನೋಡಿದ್ದೀಯಾ? ನೋಡಿದ್ದರೆ (✓) ಗುರುತು ಹಾಕು.




















ನಿನ್ನ ಶಾಲೆಯ ಮತ್ತು ಮನೆಯ ಸುತ್ತಲೂ ನೋಡಿರುವ ಸಸ್ಯಗಳ ಹೆಸರು ಹೇಳು.

ಇಲ್ಲಿ ಕೊಟ್ಟಿರುವ ಚಿತ್ರಗಳಿಗೆ ಬಣ್ಣ ಹಾಕು. ಇವುಗಳ ಹೆಸರನ್ನು ಕೇಳಿ ತಿಳಿದುಕೊ.





ಪಾಠ – 3


ನೀರು ಬೇಕು ನೀರು

ಈ ಪಾಠವನ್ನು ಕಲಿತ ನಂತರ ನೀನು,
- ನಿತ್ಯ ಜೀವನದಲ್ಲಿ ನೀರಿನ ಉಪಯೋಗಗಳನ್ನು ಗುರುತಿಸುವೆ.

ಸಲೀಂಗೆ ಬಾಯಾರಿಕೆಯಾಗಿದೆ. ಅವನು ನೀರು ಕುಡಿಯುತ್ತಿದ್ದಾನೆ.



ಚಿತ್ರ ನೋಡಿ ಕಥೆ ಹೇಳು.



ಕಾಗೆ ಹೀಗೇಕೆ ಮಾಡುತ್ತಿದೆ?



ಇಲ್ಲೊಂದು ಗಿಡ ಬಾಡಿದೆ. ಬಾಡಿದ ಗಿಡ ಹೇಗೆ ಚೇತರಿಸಿಕೊಂಡಿತು?

ನಮ್ಮಂತೆ ಗಿಡಮರಗಳಿಗೂ, ಪ್ರಾಣಿಗಳಿಗೂ ನೀರು ಬೇಕು

ನಿನ್ನ ಮನೆಯಲ್ಲಿ ನೀರನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸುತ್ತಾರೆ? ಮುಂದಿನ ಚಿತ್ರಗಳಿಗೆ (✓) ಗುರುತು ಹಾಕಿ ತೋರಿಸು.


1



2



3




4



5



6



7




8





ನಿಮ್ಮ ಶಾಲೆಯಲ್ಲಿ ನೀರನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸುತ್ತಾರೆ? ಹೇಳು.


ಕೆಳಗಿನ ಚಿತ್ರಗಳನ್ನು ನೋಡು. ನೀರನ್ನು ಇನ್ನೂ ಯಾವ ಕೆಲಸಗಳಿಗೆ ಬಳಸುತ್ತಾರೆ? ಹೇಳು.














ನಿನ್ನ ಮನೆಗೆ ನೀರನ್ನು ಎಲ್ಲಿಂದ ತರುತ್ತಾರೆ? ಕೆಳಗಿನ ಚಿತ್ರದಲ್ಲಿ (✓) ಗುರುತು ಮಾಡು.



ನಲ್ಲಿಗೆ ನೀರು ಎಲ್ಲಿಂದ ಬರುತ್ತದೆ? ಹಿರಿಯರನ್ನು ಕೇಳಿ ತಿಳಿದುಕೊ.

ಹಾಡಿ ನಲಿ

ಬೇಕೇ ಬೇಕು ನೀರು
ಕುಡಿಯಲು ಬೇಕು ನೀರು
ಸ್ನಾನಕೆ ಬೇಕು ನೀರು
ಅಡುಗೆಗೆ ಬೇಕು ನೀರು
ಬೇಕೇ ಬೇಕು ನೀರು
ಪಾತ್ರೆ ತೊಳೆಯಲು ನೀರು
ಗಿಡಕ್ಕೆ ಬೇಕು ನೀರು
ದನ ಕರುಗಳಿಗೆ ನೀರು
ಬೇಕೇ ಬೇಕು ನೀರು
ಹೊಲಕೆ ಬೇಕು ನೀರು
ಮನೆಯನು ಕಟ್ಟಲು ನೀರು
ದೋಣಿಯು ಸಾಗಲು ನೀರು
ಬೇಕೇ ಬೇಕು ನೀರು

ಅಭಿನಯ ಮಾಡಿ ತೋರಿಸು

1) ನೀರು ಕುಡಿಯುವಂತೆ
2) ಸ್ನಾನ ಮಾಡುವಂತೆ
3) ಮುಖ ತೊಳೆಯುವಂತೆ
4) ಬಟ್ಟೆ ಒಗೆಯುವಂತೆ
5) ದೋಣಿ ಸಾಗಿಸುವಂತೆ
6) ನಾಯಿ ನೀರು ಕುಡಿಯುವಂತೆ
7) ನದಿ ಹರಿಯುವಂತೆ
8) ಗಿಡಕ್ಕೆ ನೀರು ಹಾಕುವಂತೆ

ಆಟ ಆಡು

ನಿನ್ನ ಗೆಳೆಯರ ಜೊತೆಗೂಡಿ **ಕೆರೆ ದಡ** ಆಟ ಆಡು.


ಎಲ್ಲರೂ ವೃತ್ತಾಕಾರವಾಗಿ ನಿಲ್ಲಬೇಕು. ಒಬ್ಬರು ಕೆಲಸಗಳನ್ನು ಹೇಳಲಿ. ನೀರು ಬಳಕೆಯಾಗುವ ಕೆಲಸ ಹೇಳಿದರೆ ವೃತ್ತದ ಒಳಗೆ ಜಿಗಿಯಲಿ. ನೀರು ಬಳಕೆಯಾಗದ ಕೆಲಸ ಹೇಳಿದರೆ ವೃತ್ತದ ಹೊರಗೆ ಜಿಗಿಯಲಿ.

ಪಾಠ – 4

ಸವಿರುಚಿ


ಈ ಪಾಠವನ್ನು ಕಲಿತ ನಂತರ ನೀನು,
- ಸ್ಥಳೀಯವಾಗಿ ದೊರೆಯುವ ಆಹಾರಗಳನ್ನು ತಿಳಿಯುವೆ.
- ಸ್ಥಳೀಯವಾಗಿ ದೊರೆಯುವ ಆಹಾರ ವಸ್ತುಗಳನ್ನು ಗುರುತಿಸುವೆ.
- ನೀನು ಸೇವಿಸುವ ಆಹಾರವನ್ನು ಗುರುತಿಸುವೆ.

ಈ ಚಿತ್ರಗಳಲ್ಲಿ ನೀನು ತಿಂದಿರುವ ತಿಂಡಿ ತಿನಿಸುಗಳಿವೆಯೇ? ಇದ್ದಲ್ಲಿ (✓) ಗುರುತು ಹಾಕು.



ನಿನಗೆ ತುಂಬಾ ಇಷ್ಟವಾದ ತಿಂಡಿ ಯಾವುದು? ಹೇಳು.

ಈ ಚಿತ್ರಗಳಲ್ಲಿ ನಿನಗೆ ಗೊತ್ತಿರುವ ಆಹಾರ ವಸ್ತುಗಳಿಗೆ (✓) ಗುರುತು ಹಾಕು.



ನಿಮ್ಮ ಊರಿನಲ್ಲಿ ಬೆಳೆಯುವ ಹಾಗೂ ದೊರಕುವ ಆಹಾರ ವಸ್ತುಗಳನ್ನು ತಿಳಿಸು.

ಚಿತ್ರದ ಒಳವೃತ್ತದಲ್ಲಿ ಆಹಾರ ವಸ್ತುಗಳಿವೆ. ಅವುಗಳಿಂದ ತಯಾರಿಸಿದ ತಿನಿಸುಗಳು ಹೊರವೃತ್ತದಲ್ಲಿವೆ. ಚಿತ್ರದಲ್ಲಿರುವ ಆಹಾರ ವಸ್ತುಗಳಿಗೂ ಮತ್ತು ಅವುಗಳಿಂದ ತಯಾರಾಗುವ ತಿನಿಸುಗಳಿಗೂ ಗೆರೆ ಎಳೆದು ಹೊಂದಿಸು.



ಹಬ್ಬದ ದಿನ ನಿನ್ನ ಮನೆಯಲ್ಲಿ ತಯಾರಿಸುವ ತಿನಿಸುಗಳನ್ನು ಹೇಳು.

ಈ ಕೆಳಗಿನ ಚಿತ್ರಗಳಲ್ಲಿ ನೀನು ಹಸಿಯಾಗಿ ತಿನ್ನುವ ಆಹಾರ ವಸ್ತುಗಳಿಗೆ □ ಗುರುತು ಹಾಕು, ಬೇಯಿಸಿ ತಿನ್ನುವ ಆಹಾರ ವಸ್ತುಗಳಿಗೆ ○ ಗುರುತು ಹಾಕು.



















ಆಟ ಆಡು.

ನಿನ್ನ ಗೆಳೆಯರೊಂದಿಗೆ ವೃತ್ತಾಕಾರವಾಗಿ ನಿಲ್ಲು. ಈಗ ಒಬ್ಬೊಬ್ಬರಾಗಿ ತಮಗೆ ಇಷ್ಟವಾದ ತಿಂಡಿಯ ಹೆಸರನ್ನು ಹೇಳಲಿ. ಅದನ್ನು ತಯಾರಿಸಲು ಬೇಕಾಗುವ ಆಹಾರ ವಸ್ತುಗಳನ್ನು ಹೆಸರಿಸಲಿ. ಹೀಗೆ ಆಟ ಮುಂದುವರೆಯಲಿ. ನಿನಗೆ ಆಹಾರ ವಸ್ತುಗಳ ಬಗ್ಗೆ ತಿಳಿದಿಲ್ಲವಾದರೆ ನಂತರ ಗೆಳೆಯರನ್ನು ಅಥವಾ ಮನೆಯವರನ್ನು ಕೇಳಿ ತಿಳಿದುಕೊ.

ನಿನಗೆ ಇಷ್ಟವಾದ ತಿಂಡಿಗೆ (✓) ಗುರುತು ಹಾಕು. ಇದು ನಿನಗೆ ಏಕೆ ಇಷ್ಟ? ಹೇಳು.







ನಿನಗೆ ಇಷ್ಟವಾದ ಹಣ್ಣಿಗೆ (✓) ಗುರುತು ಹಾಕು. ಇದು ನಿನಗೆ ಏಕೆ ಇಷ್ಟ? ಹೇಳು.







ನಿನಗೆ ಇಷ್ಟವಾದ ತರಕಾರಿಗೆ (✓) ಗುರುತು ಹಾಕು. ಇದು ನಿನಗೆ ಏಕೆ ಇಷ್ಟ? ಹೇಳು.









ನಿನ್ನ ಮನೆಯಲ್ಲಿ ತರಕಾರಿ ಮತ್ತು ಹಣ್ಣುಗಳ ಗಿಡಗಳಿವೆಯೆ? ಇದ್ದರೆ ಅವು ಯಾವುವೆಂದು ಹೇಳು.

ಈ ಕೆಳಗಿನ ಚಿತ್ರಗಳಿಗೆ ಬಣ್ಣ ಹಾಕು.









ನಿನ್ನ ಮನೆಯಲ್ಲಿ ತಯಾರಿಸುವ ತಿಂಡಿ ತಿನಿಸುಗಳನ್ನು ಹೇಳು. ಅವುಗಳನ್ನು ತಯಾರಿಸಲು ಬೇಕಾಗುವ ಆಹಾರ ವಸ್ತುಗಳನ್ನು ಕೇಳಿ ತಿಳಿದುಕೊ.

ನಿನ್ನ ಶಿಕ್ಷಕರು ತೋರಿಸುವ ಆಹಾರ ವಸ್ತುಗಳನ್ನು ಗುರುತಿಸು. (ಅಕ್ಕಿ, ಬೇಳೆ, ಎಳ್ಳು, ಕಡಲೆಬೀಜ ಇತ್ಯಾದಿ ಪೊಟ್ಟಣಗಳನ್ನು ಶಿಕ್ಷಕರು ತೋರಿಸಬೇಕು.)

ಹಾಡಿ ನಲಿ

ಬೇಕೇ ಬೇಕು ತರಕಾರಿ
ತರ ತರ ಜಾತಿಯ ತರಕಾರಿ

ಬೆರಳನು ಹೋಲುವ ಬೆಂಡೆಕಾಯಿ
ಹಾವನು ಹೋಲುವ ಪಡವಲಕಾಯಿ

ಕಹಿ ಕಹಿ ರುಚಿಯ ಹಾಗಲಕಾಯಿ
ಕೋಲಿನಂತಿರುವ ನುಗ್ಗೇಕಾಯಿ

ಬಣ್ಣ ಬಣ್ಣದ ಬದನೇಕಾಯಿ
ಪಲ್ಯಕೆ ಬೇಕು ಹುರುಳೀಕಾಯಿ

ನಾನಾ ಬಗೆಯ ತರಕಾರಿ
ಮಾರುತ ಬರುವಳು ಕಾವೇರಿ

(ಇಲ್ಲಿ ಕೊಟ್ಟಿರುವ ಹಾಡನ್ನು ಹಾಡಿ ಅಭಿನಯಿಸಿ, ನಿನಗೆ ತಿಳಿದಿರುವ ತರಕಾರಿಗಳನ್ನು ಸೇರಿಸಿ ಹಾಡನ್ನು ಮುಂದುವರೆಸು.)

ಪಾಠ – 5

ನಮಗೆ ಆಹಾರ ಬೇಕೆ?

ಈ ಪಾಠವನ್ನು ಕಲಿತ ನಂತರ ನೀನು,
- ಆಹಾರದ ಅವಶ್ಯಕತೆಯನ್ನು ತಿಳಿಯುವೆ.

ಹಾಡಿ ನಲಿ

ಬೆಳಗ್ಗೆಯಿಂದ ಊಟವಿಲ್ಲ ಸುಸ್ತೋ ಸುಸ್ತು
ಊಟ ಆದ ಮೇಲೆ ನಾನು ಮಸ್ತೋ ಮಸ್ತು

ಅಕ್ಕಿ, ಬೇಳೆ ಕಾಳಿನಿಂದ ಬರುವುದು ಶಕ್ತಿ
ಹಣ್ಣು, ಕಾಯಿ ತಿಂದರೇನೇ ಬರುವುದು ಯುಕ್ತಿ


ಹಾಲು, ಮೊಸರು, ಬೆಣ್ಣೆ ತಿಂದು ಗಟ್ಟಿ ಗಟ್ಟಿ
ದಷ್ಟ ಪುಷ್ಟವಾಗಿ ದೇಹ ಜಟ್ಟಿ ಜಟ್ಟಿ

ಹಾಡಿ ನಲಿ

ಬೇಕೇ ಬೇಕು ಆಹಾರ
ದೇಹವು ಬೆಳೆಯಲು ಆಕಾರ
ಚೆಂದದ ಮನಸು, ಸುಂದರ ದೇಹ
ನೆಮ್ಮದಿ ಬದುಕಿನ ಆಧಾರ.

ಈ ಚಿತ್ರಗಳನ್ನು ಗಮನಿಸು.






ಆರೋಗ್ಯವಾಗಿರಲು ಮತ್ತು ಶಕ್ತಿಗಾಗಿ ಆಹಾರ ಬೇಕು.








ದೇಹದ ಬೆಳವಣಿಗೆಗೆ ಆಹಾರ ಬೇಕು







ಕೆಲಸ ಮಾಡಲು ಬೇಕಾಗುವ ಶಕ್ತಿ ಆಹಾರದಿಂದ ಬರುತ್ತದೆ.

ಆಹಾರ ಏಕೆ ಬೇಕು? ಹೇಳು.

ಪಾಠ – 6

ನನ್ನ ಮನೆ

ಈ ಪಾಠವನ್ನು ಕಲಿತ ನಂತರ ನೀನು,

- ನಿನ್ನ ಮನೆಯ ಪರಿಚಯ ಮಾಡಿಕೊಳ್ಳುವೆ.
- ಮನೆಯನ್ನು ಆಧಾರವಾಗಿಟ್ಟುಕೊಂಡು ಸ್ಥಳೀಯ ಪ್ರದೇಶದ ದೂರವನ್ನು ಬಹಳ ಹತ್ತಿರ, ಹತ್ತಿರ, ದೂರ, ಬಹಳ ದೂರ ಹೀಗೆ ಅಂದಾಜು ಮಾಡುವೆ.

ಇದು ರಾಧಾಳ ಮನೆಯ ಚಿತ್ರ. ಇದನ್ನು ಗಮನಿಸು.




ಈ ಪ್ರಶ್ನೆಗಳಿಗೆ ಉತ್ತರಿಸು.

- ರಾಧಾಳ ಮನೆಯಲ್ಲಿ ಯಾರು ಯಾರು ಇದ್ದಾರೆ?
- ಅವರು ಏನು ಮಾಡುತ್ತಿದ್ದಾರೆ?

- ರಾಧಾಳ ಮನೆಯಲ್ಲಿರುವ ಕಿಟಕಿ ಬಾಗಿಲುಗಳನ್ನು ಎಣಿಸಿ ಹೇಳು.
- ನಿನ್ನ ಮನೆಯಲ್ಲಿ ಯಾರು ಯಾರು ಇದ್ದಾರೆ?
- ನಿನ್ನ ಮನೆಯಲ್ಲಿ ಪ್ರಾಣಿಗಳನ್ನು ಸಾಕಿದ್ದಾರೆಯೆ?
- ನಿನ್ನ ಮನೆಗೆ ಎಷ್ಟು ಕಿಟಕಿ ಬಾಗಿಲುಗಳಿವೆ?

ರಾಜನ ಮನೆಯ ಚಿತ್ರವನ್ನು ಗಮನಿಸು. ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸು.



- ರಾಜನ ಮನೆಗೆ ಬಹಳ ಹತ್ತಿರ ಏನಿದೆ?
- ರಾಜನ ಮನೆಯ ಹತ್ತಿರ ಏನಿದೆ?
- ಶಾಲೆ ಎಲ್ಲಿದೆ?
- ರಾಜನ ಮನೆಯಿಂದ ಬಹಳ ದೂರದಲ್ಲಿ ಏನಿದೆ?

ನಿನ್ನ ಮನೆಯಿಂದ ಈ ಜಾಗಗಳಿಗೆ ಇರುವ ದೂರವನ್ನು (✓) ಗುರುತಿನಿಂದ ತೋರಿಸು.

ಕ್ರ. ಸಂ.	ಜಾಗ	ಬಹಳ ಹತ್ತಿರ	ಹತ್ತಿರ	ದೂರ	ಬಹಳ ದೂರ
1	ಗೆಳೆಯ/ಗೆಳತಿಯ ಮನೆ				
2	ಕೈ ಪಂಪು/ನಲ್ಲಿ				
3	ಶಾಲೆ				
4	ಅಂಗಡಿ				
5	ಅಂಗನವಾಡಿ				
6	ಬಾವಿ				
7	ಬಸ್ ನಿಲ್ದಾಣ				
8	ಕಚೇರಿ/ಆಸ್ಪತ್ರೆ				

ಉತ್ತರವನ್ನು ಹೇಳು.

- ನಿನ್ನ ಮನೆಗೆ ಬಹಳ ಹತ್ತಿರ ಏನಿದೆ?
- ನಿನ್ನ ಮನೆಯ ಹತ್ತಿರ ಏನಿದೆ?
- ನಿನ್ನ ಮನೆಯಿಂದ ದೂರದಲ್ಲಿ ಏನಿದೆ?
- ನಿನ್ನ ಮನೆಯಿಂದ ಬಹಳ ದೂರದಲ್ಲಿ ಏನಿದೆ?
- ನಿನ್ನ ಶಾಲೆಯ ಹತ್ತಿರ ಏನಿದೆ?
- ನಿನ್ನ ಶಾಲೆಯಿಂದ ದೂರದಲ್ಲಿ ಏನಿದೆ?

ಈ ಚಿತ್ರಕ್ಕೆ ಬಣ್ಣ ಹಾಕು.



ಹಾಡಿ ನಲಿ

ಮನೆ ಮನೆ ನಮ್ಮ ಮನೆ
ಕಿಟಕಿ ಬಾಗಿಲು ಇರುವ ಮನೆ
ಚೆಂದದ ತೋಟವು ಇರುವ ಮನೆ
ಮನೆ ಮನೆ ನಮ್ಮ ಮನೆ.

ಗಾಳಿ ಬೆಳಕು ಇರುವ ಮನೆ
ಶುಭ್ರ ಸ್ವಚ್ಛ ನಮ್ಮ ಮನೆ
ಕೂಡಿ ಎಲ್ಲರು ನಲಿವ ಮನೆ
ಮನೆ ಮನೆ ನಮ್ಮ ಮನೆ.




ಪಾಠ – 7


ಸ್ವಚ್ಛ ಅಭ್ಯಾಸಗಳು

ಈ ಪಾಠವನ್ನು ಕಲಿತ ನಂತರ ನೀನು,
- ದೇಹದ ಭಾಗಗಳನ್ನು ಗುರುತಿಸುವೆ.
- ದೇಹದ ಅಂಗಗಳ ಸ್ವಚ್ಛತೆಯ ಪ್ರಾಮುಖ್ಯ ಮತ್ತು ಸ್ವಚ್ಛತೆಯ ಅಭ್ಯಾಸಗಳನ್ನು ಅರಿಯುವೆ.

ಇಲ್ಲಿ ಗುರುತಿಸಿರುವ ದೇಹದ ಭಾಗಗಳ ಹೆಸರು ಹೇಳು.



ಈ ಭಾಗಗಳನ್ನು ನಿನ್ನ ದೇಹದಲ್ಲಿ ಗುರುತಿಸಿಕೊ.


ನಾನು ಯಾರು?
ನನ್ನಿಂದ ನಿನಗೇನು
ಉಪಯೋಗ? ಹೇಳು.

ಈ ಭಾಗಗಳನ್ನು ಯಾವ ಕೆಲಸಕ್ಕಾಗಿ ಉಪಯೋಗಿಸುವೆ? ಗೆರೆ ಎಳೆದು ಹೊಂದಿಸು.



ಈ ಚಿತ್ರಗಳಲ್ಲಿ ನಡೆಯುತ್ತಿರುವ ಕೆಲಸಗಳನ್ನು ಹೇಳು. ಈ ಕೆಲಸ ಮಾಡಲು ನಿನ್ನ ದೇಹದ ಯಾವ ಯಾವ ಭಾಗಗಳನ್ನು ಉಪಯೋಗಿಸುವೆ?














ನಿನ್ನ ಕೈ ನೋಡಿಕೊ, ಎಷ್ಟು ಬೆರಳುಗಳಿವೆ? ಎಣಿಸು.
ಎಲ್ಲಾ ಬೆರಳುಗಳು ಒಂದೇ ರೀತಿಯಲ್ಲಿವೆಯೇ ಗಮನಿಸು.





ಕೆಳಗೆ ಕೊಟ್ಟಿರುವ ಜಾಗದಲ್ಲಿ ನಿನ್ನ ಎಡಗೈಯನ್ನು ಇಟ್ಟುಕೊ. ಬೆರಳುಗಳನ್ನು ಅಗಲಿಸು, ಪೆನ್ಸಿಲಿನಿಂದ ಬೆರಳುಗಳ ಸುತ್ತ ಗೆರೆ ಹಾಕು.

ಚಿತ್ರಗಳನ್ನು ಗಮನಿಸು.



ಉತ್ತರಿಸು.

- ನೀನು ಹಲ್ಲುಜ್ಜಲು ಏನನ್ನು ಬಳಸುವೆ?
- ನೀನು ಉಗುರು ಕತ್ತರಿಸಲು ಏನನ್ನು ಬಳಸುವೆ?
- ನೀನು ತಿಂಡಿ, ಊಟಮಾಡುವ ಮುನ್ನ ಏನು ಮಾಡುವೆ?
- ಶಾಲೆಯಿಂದ ಮನೆಗೆ ಬಂದ ಕೂಡಲೇ ನೀನು ಏನು ಮಾಡುವೆ?

ಈ ವೃತ್ತದಲ್ಲಿ ಕೆಲವು ವಸ್ತುಗಳಿವೆ. ಇಲ್ಲಿನ ಯಾವ ವಸ್ತುಗಳನ್ನು ನೀನು ಬಳಸುವೆ? ಆ ವಸ್ತುಗಳಿಗೆ ವೃತ್ತ ಹಾಕು.



ಕೆಲಸಗಳನ್ನು ಅಭಿನಯಿಸಿ ತೋರಿಸು.

1. ಹಲ್ಲುಜ್ಜುವುದು
2. ತಲೆ ಬಾಚುವುದು
3. ಸ್ನಾನ ಮಾಡುವುದು
4. ಮೈ ಒರೆಸಿಕೊಳ್ಳುವುದು
5. ಮುಖ ತೊಳೆಯುವುದು
6. ಉಗುರು ಕತ್ತರಿಸುವುದು
7. ಕಾಲು ತೊಳೆಯುವುದು
8. ಕೈ ತೊಳೆಯುವುದು
9. ಪ್ರಾರ್ಥನೆ ಮಾಡುವುದು

ಪಾಠ – 8

ಸುರಕ್ಷತೆ ಮತ್ತು ಶಿಸ್ತು

ಈ ಪಾಠವನ್ನು ಕಲಿತ ನಂತರ ನೀನು,
- ವೈಯಕ್ತಿಕ ಸುರಕ್ಷತೆಯನ್ನು ಅರಿಯುವೆ.
- ಸರತಿಯಲ್ಲಿ ಕಾಯುವೆ.
- ಅವಶ್ಯಕತೆಗಳನ್ನು ಪೂರೈಸುವ ಸೌಲಭ್ಯಗಳನ್ನು ಗುರುತಿಸುವೆ.

ಚಿತ್ರಗಳನ್ನು ಗಮನಿಸು.




ಉತ್ತರಿಸು.

- ಇವರಿಗೇನು ಅಪಾಯ ಉಂಟಾಗಬಹುದು. ಏಕೆ?
- ನೀನು ಎಂದಾದರೂ ಹೀಗೆ ಮಾಡಿದ್ದೀಯಾ?
- ಯಾವುದಾದರೂ ಅಪಾಯಕ್ಕೆ ಸಿಕ್ಕಿ ಹಾಕಿಕೊಂಡಿದ್ದೀಯಾ?

ನಿನ್ನ ಹಿರಿಯರು ಕೆಲಸಗಳನ್ನು ಮಾಡುವಾಗ ಗಮನಿಸು. ಅವರನ್ನು ಅನುಸರಿಸು. ಹಿರಿಯರು ಹಾಗೂ ಶಿಕ್ಷಕರು ಹೇಳುವ ಎಚ್ಚರಿಕೆಯ ಮಾತುಗಳನ್ನು ಪಾಲಿಸು, ನೀನು ಸುರಕ್ಷಿತವಾಗಿರುತ್ತೀಯ.

ಕೆಳಗಿನ ಚಿತ್ರಗಳನ್ನು ಗಮನಿಸು.

ಚಿತ್ರದಲ್ಲಿ ಏನು ಕಂಡುಬರುತ್ತಿದೆ? ಹೇಳು



ಈ ಚಿತ್ರದಿಂದ ನೀನೇನು ತಿಳಿದೆ?

ಚಿತ್ರಗಳಲ್ಲಿ ಸರಿ ಅನಿಸಿದ್ದಕ್ಕೆ (✓) ಗುರುತು, ತಪ್ಪು ಅನಿಸಿದ್ದಕ್ಕೆ (X) ಗುರುತು ಹಾಕು.




ನೀನು ಹಾಕಿರುವ ಗುರುತಿಗೆ ಕಾರಣ ಹೇಳು.

ಕೆಳಗಿನ ವಾಕ್ಯಗಳಲ್ಲಿ ಸರಿ (✓) ಯಾವುದು, ತಪ್ಪು (X) ಯಾವುದು ಗುರುತಿಸು.

1. ಸಾಲಿನಲ್ಲಿ ನಿಂತರೆ ಸಮಯ ಹಾಳು. ☐
2. ಸರತಿಯಲ್ಲಿ ನಿಂತರೆ ಎಲ್ಲರಿಗೂ ನೀರು ಸಿಗುತ್ತದೆ. ☐
3. ಸಾಲಿನಲ್ಲಿ ನಿಂತರೆ ಯಾರಿಗೂ ತೊಂದರೆಯಾಗುವುದಿಲ್ಲ. ☐
4. ಬಸ್ ಹತ್ತಲು ಸಾಲಿನಲ್ಲಿ ನಿಂತರೆ ಒಳ್ಳೆಯದು. ☐

ಈ ಚಿತ್ರದಲ್ಲಿ ನಿನಗೆ ಏನೇನು ಕಾಣುತ್ತದೆ? ಹೇಳು.



- ಬೀದಿ ದೀಪ ಏಕೆ ಬೇಕು?
- ಶಾಲೆ ಏಕೆ ಬೇಕು?
- ಬಸ್ ನಿಲ್ದಾಣದಿಂದ ನಿನಗೇನು ಉಪಯೋಗ?
- ನೀನು ಆಸ್ಪತ್ರೆಗೆ ಏಕೆ ಹೋಗುವೆ?


ಇವೆಲ್ಲವೂ ಎಲ್ಲರಿಗೂ ಬೇಕಾದ ಸೌಕರ್ಯಗಳು. ನಿಮ್ಮ ಊರಿನಲ್ಲಿ ಯಾವ ಸೌಕರ್ಯಗಳಿವೆ ಹೇಳು. ಈ ಸೌಕರ್ಯಗಳನ್ನು ಊರಿನ ಜನರು ಏತಕ್ಕಾಗಿ ಉಪಯೋಗಿಸುತ್ತಾರೆ? ಗಮನಿಸು.

ಪಾಠ – 9

ಕೂ...... ಚುಕು.. ಬುಕು..

ಈ ಪಾಠವನ್ನು ಕಲಿತ ನಂತರ ನೀನು,
- ಸ್ಥಳೀಯ ಸಾರಿಗೆಯ ವಿವಿಧ ಬಗೆಗಳನ್ನು ಗುರುತಿಸುವೆ.

ಈ ಕೆಳಗಿನ ಚಿತ್ರಗಳಲ್ಲಿರುವ ವಾಹನಗಳ ಹೆಸರನ್ನು ಹೇಳು.



ನಿನ್ನ ಊರಿನಲ್ಲಿ ಕಂಡುಬರುವ ವಾಹನಗಳಿಗೆ (✓) ಗುರುತು ಹಾಕು.

ನೀನು ಯಾವ ಯಾವ ವಾಹನಗಳಲ್ಲಿ ಪ್ರಯಾಣ ಮಾಡಿರುವೆ? ಅವುಗಳ ಹೆಸರನ್ನು ಹೇಳು.


ಈ ಚಿತ್ರಗಳನ್ನು ನೋಡು, ನಿನಗೆ ಇಷ್ಟವಾದ ವಾಹನ ಯಾವುದು? ಏಕೆ?




ಆಟ ಆಡು

- ಈ ವಾಹನಗಳಂತೆ ಶಬ್ದಮಾಡುತ್ತಾ ಚಲಿಸು –
  ರೈಲು, ಸೈಕಲ್, ಸ್ಕೂಟರ್, ಬಸ್ಸು.
- ನಿನ್ನ ಗೆಳೆಯರೊಡನೆ ರೈಲಿನ ಆಟ ಆಡು.
- ಕಾಗದದಲ್ಲಿ ದೋಣಿಮಾಡಿ, ನೀರಿನಲ್ಲಿ ತೇಲಿ ಬಿಡು.

ದೋಣಿ ಮಾಡುವ ವಿಧಾನವನ್ನು ಕಲಿ.



ಈ ಚಿತ್ರಗಳಿಗೆ ಬಣ್ಣ ಹಾಕು.





ಈ ವಾಹನಗಳು ಎಲ್ಲಿ ಚಲಿಸುತ್ತವೆ? ಗೆರೆ ಎಳೆದು ಹೊಂದಿಸು.


















ಹಾಡಿ ನಲಿ

ಟ್ರಿನ್ ಟ್ರಿನ್ ಟ್ರಿನ್ ಸೈಕಲ್ ಗಾಡಿ
ಪೋಂ ಪೋಂ ಪೋಂ ಮೋಟಾರು ಗಾಡಿ
ಚುಕು ಬುಕು ಚುಕು ಬುಕು ರೈಲು ಗಾಡಿ
ಊರಿನ ತುಂಬಾ ತರ ತರ ಬಂಡಿ

ರಸ್ತೆಯ ನಡುವೆ ಬಸ್ಸಿನ ಓಟ
ಕಂಬಿಯ ಮೇಲದೋ ರೈಲಿನ ಓಟ
ಬಾನಲಿ ಹಾರಿತು ನೋಡು ವಿಮಾನ
ತೆರೆಗಳ ಮೇಲೆ ಹಡಗಿನ ಯಾನ

ನೋಡದೋ ನೋಡದೋ ವಿಧ ವಿಧ ಸಾರಿಗೆ
ತಿಳಿದುಕೋ ಬಗೆ ಬಗೆ ಸಾರಿಗೆ
ಎಲ್ಲೆಡೆ ಚಲಿಸುವ ತರತರ ಸಾರಿಗೆ
ಸಂಚಾರಕೆ ಬೇಕಿವು ಎಲ್ಲರಿಗೆ ನಮ್ಮೆಲ್ಲರಿಗೆ.






ಪಾಠ – 10

ನಾನು ಮತ್ತು ನಮ್ಮವರು

ಈ ಪಾಠವನ್ನು ಕಲಿತ ನಂತರ ನೀನು,
- ಕುಟುಂಬದೊಂದಿಗೆ ಇರುವ ಸಂಬಂಧವನ್ನು ಅರಿಯುವೆ.
- ಮನೆ ಕೆಲಸದಲ್ಲಿ ಇರುವ ಪರಸ್ಪರ ಸಹಕಾರವನ್ನು ಅರಿಯುವೆ.
- ಕುಟುಂಬ ಹಾಗೂ ಸುತ್ತಲಿನ ಸ್ನೇಹಿತರನ್ನು ಗುರುತಿಸುವೆ.


ಚಿತ್ರವನ್ನು ನೋಡು.



ಇದು ಸುನೀಲನ ಮನೆಯ ಚಿತ್ರ. ಈ ಚಿತ್ರದಲ್ಲಿರುವವರು ಸುನೀಲನ ಮನೆಯ ಜನರು. ಈ ಚಿತ್ರದಲ್ಲಿ ಯಾರು ಯಾರು ಇದ್ದಾರೆ? ಹೇಳು.


ನಿನ್ನ ಮನೆಯಲ್ಲಿ ಯಾರು ಯಾರು ಇದ್ದಾರೆ ಎಂಬುದನ್ನು ಚೌಕಗಳಲ್ಲಿ (✓) ಗುರುತು ಹಾಕು.


















ನಿನ್ನ ಮನೆಯಲ್ಲಿ ಇನ್ನೂ ಯಾರು ಯಾರು ಇದ್ದಾರೆ? ಹೇಳು.

ಈ ಚಿತ್ರದಲ್ಲಿ ಯಾರು ಯಾರು ಇದ್ದಾರೆ? ಗುರುತಿಸಿ ಹೇಳು.



ಹಾಡಿ ನಲಿ

ಈ ಹಾಡನ್ನು ರಾಗಬದ್ಧವಾಗಿ ಹೇಳು.

ಕೂಡಿ ಬಾಳುವಾ ನಾವೆಲ್ಲಾ
ಎಲ್ಲರೂ ಬೇಕು ನನಗೆ
ಎಲ್ಲರೂ ಕೂಡಿ ಬಾಳುತಲಿದ್ದರೆ
ಹರುಷವು ಎಂದೂ ಮನೆಗೆ

ಅಪ್ಪನ ಅಪ್ಪ ನನ್ನಯ ತಾತ
ಅಮ್ಮನ ಅಪ್ಪನೂ ನನ್ನಯ ತಾತ
ಅಪ್ಪನ ಅಮ್ಮ ನನ್ನಜ್ಜಿ
ಅಮ್ಮನ ಅಮ್ಮನೂ ನನಗಜ್ಜಿ

ಉತ್ತರಿಸು.


- ಅಮ್ಮನ ಅಪ್ಪ ನಿನಗೇನಾಗಬೇಕು?
- ಅಪ್ಪನ ಅಮ್ಮ ನಿನಗೇನಾಗಬೇಕು?
- ಅಮ್ಮನ ಅಮ್ಮ ನಿನಗೇನಾಗಬೇಕು?
- ಅಪ್ಪನ ಅಪ್ಪ ನಿನಗೇನಾಗಬೇಕು?

ಈ ಚಿತ್ರಗಳನ್ನು ನೋಡು. ನಿನ್ನ ಈ ಕೆಲಸಗಳಿಗೆ ಯಾರು ಸಹಾಯ ಮಾಡುತ್ತಾರೆ? ಹೇಳು.













ಚಿತ್ರಗಳನ್ನು ನೋಡು. ಈ ಕೆಲಸಗಳಿಗೆ ಯಾರು ಸಹಾಯ ಮಾಡುತ್ತಿದ್ದಾರೆ ಎನ್ನುವುದನ್ನು ಗೆರೆ ಎಳೆದು ಹೊಂದಿಸು.




















ಈ ಚಿತ್ರಗಳನ್ನು ನೋಡು, ಈ ಚಿತ್ರಗಳಲ್ಲಿ ನಡೆಯುತ್ತಿರುವ ಕೆಲಸಗಳೇನು? ಯಾರು ಯಾರಿಗೆ ಸಹಾಯ ಮಾಡುತ್ತಿದ್ದಾರೆ? ಹೇಳು.







ಈ ಚಿತ್ರಗಳನ್ನು ನೋಡು. ನೀನು ಯಾವ ಯಾವ ಕೆಲಸಗಳಿಗೆ ಸಹಾಯ ಮಾಡುವೆ? ಚೌಕಗಳಲ್ಲಿ (✓) ಗುರುತು ಹಾಕು.









ಚಿತ್ರಗಳನ್ನು ನೋಡು. ನೀನು ಮಾಡುವ ಕೆಲಸಗಳಿಗೆ ಗೆರೆ ಎಳೆ. ಮಾದರಿಯನ್ನು ತೋರಿಸಿದೆ.



ನೀನು ಶಾಲೆಯಲ್ಲಿ ಮಾಡುವ ಕೆಲಸಗಳಿಗೆ (✓) ಗುರುತು ಹಾಕು.





ನೀನು ಶಾಲೆಯಲ್ಲಿ ಯಾರ ಜೊತೆ ಊಟ ಮಾಡುವೆ?



ನಿನ್ನ ಮನೆಯ ಹತ್ತಿರ ಇರುವ ಗೆಳೆಯರನ್ನು ಹೆಸರಿಸು.

ಹಾಡಿ ನಲಿ

ನಾವೆಲ್ಲರೂ ಎಳೆಯರು
ನಾವೆಲ್ಲರೂ ಗೆಳೆಯರು
ಶಾಲೆಗೆಲ್ಲ ಬರುವೆವು
ಎಲ್ಲ ಸೇರಿ ಕಲಿವೆವು
ಎಲ್ಲ ಆಡಿ ನಲಿವೆವು




ಪಾಠ – 11

ನೆರೆಹೊರೆ

ಈ ಪಾಠವನ್ನು ಕಲಿತ ನಂತರ ನೀನು,

- ನಿನ್ನ ಮನೆಯಲ್ಲಿ ನಡೆಯುವ ಹಾಗೂ ನೆರೆಹೊರೆಯಲ್ಲಿ ನಡೆಯುವ ಕೆಲಸಗಳನ್ನು ಗುರುತಿಸುವೆ.
- ನೆರೆಹೊರೆಯವರ ಸಹಕಾರವನ್ನು ಅರಿಯುವೆ.

ನಿನ್ನ ಮನೆಯಲ್ಲಿ ಮಾಡುವ ಕೆಲಸಗಳು ನಿನಗಾಗಲೇ ತಿಳಿದಿದೆ. ಈ ಚಿತ್ರಗಳನ್ನು ನೋಡು. ಅಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸು.




ಮನೆಯ ಮುಂದೆ ಏನಿದೆ?


ಇಲ್ಲಿ ಏನಾಗುತ್ತಿದೆ?

ನಲ್ಲಿ ಇರುವ ಜಾಗ ಹೇಗಿದೆ?

ಇವರು ಏನು ಮಾಡುತ್ತಿದ್ದಾರೆ?




ರಮಾ ಎಲ್ಲರನ್ನೂ ಏಕೆ ಕರೆದಳು?



ಇವರು ಏನು ಮಾಡುತ್ತಿದ್ದಾರೆ?



ರವಿ ಏಕೆ ಅಳುತ್ತಿದ್ದಾನೆ?



ರವಿ ಏಕೆ ಸುಮ್ಮನಾದ?



- ನೀನು ನೆರೆಹೊರೆಯವರೊಡನೆ ಸೇರಿ ಆಡುವ ಆಟಗಳನ್ನು ಹೇಳು.
- ನೆರೆಹೊರೆಯವರೊಡನೆ ಕೂಡಿ ಹಾಡುವ ಹಾಡುಗಳನ್ನು ಹೇಳು.

ಇಲ್ಲಿ ಮಕ್ಕಳು ಏನು ಮಾಡುತ್ತಿದ್ದಾರೆ ಎಂದು ಹೇಳು. ನೀನು ಮಾಡುವ ಕೆಲಸಗಳಿಗೆ (✓) ಗುರುತು ಹಾಕು.



ಹಿರಿಯರು ಏನು ಮಾಡುತ್ತಿದ್ದಾರೆ?


ಪಾಠ – 12


ಆಡು–ಆಟ ಆಡು

ಈ ಪಾಠವನ್ನು ಕಲಿತ ನಂತರ ನೀನು,
- ವಿವಿಧ ಆಟಗಳನ್ನು ಹೆಸರಿಸುವೆ.

ಈ ಚಿತ್ರಗಳನ್ನು ಗಮನಿಸು, ನೀನು ಆಡುವ ಆಟಗಳಿಗೆ (✓) ಗುರುತು ಹಾಕು.










ಇಲ್ಲಿ ಕೆಲವು ಆಟಗಳ ಚಿತ್ರಗಳನ್ನು ಕೊಟ್ಟಿದೆ. ಇವುಗಳ ಹೆಸರನ್ನು ಹೇಳು.

















ಈ ಚಿತ್ರಗಳಲ್ಲಿ ಆಟದ ವಸ್ತುಗಳನ್ನು ಕೊಟ್ಟಿದೆ. ಇವುಗಳನ್ನು ಯಾವ ಆಟಗಳಲ್ಲಿ ಬಳಸುವೆ? ಹೇಳು.















ಇಲ್ಲಿ ಸಣ್ಣ ಮತ್ತು ದೊಡ್ಡ ಚೆಂಡನ್ನು ಬಳಸಿ ಆಡುವ ಆಟಗಳನ್ನು ತೋರಿಸಿದೆ. ನೋಡು.












ನೀನು ಚೆಂಡನ್ನು ಬಳಸಿ ಆಡುವ ಇತರ ಆಟಗಳನ್ನು ಹೆಸರಿಸು.






ಹಾಡಿ ನಲಿ

ವಾರಕೆ ಏಳೇ ಏಳು ದಿನ
ಭಾನುವಾರವೆ ರಜದ ದಿನ
    ಸೋಮವಾರ ಚಿಣ್ಣಿಯ ಕೋಲು
    ಮಂಗಳವಾರ ವಾಲಿಬಾಲು
ಬೇಟೆಯ ಆಟವು ಬುಧವಾರ
ಗರಡಿಯ ಮನೆಯಲಿ ಗುರುವಾರ
    ಶುಕ್ರವಾರಕೆ ಬುಗುರಿ ಚೆಂಡು
    ಶನಿವಾರಕೆ ಕ್ರಿಕೆಟ್ ದಾಂಡು
ವಾರಕೆ ಏಳೇ ಏಳು ದಿನ
ಆಟಕೆ ಸಾಲದು ಏಳು ದಿನ

ಜಿ.ಪಿ.ರಾಜರತ್ನಂ

ಈ ಚಿತ್ರಗಳಿಗೆ ಬಣ್ಣ ಹಾಕು.





ಪಾಠ – 13

ನನಗಿವು ಬೇಕು


ಈ ಪಾಠವನ್ನು ಕಲಿತ ನಂತರ ನೀನು,

- ಮೂಲಭೂತ ಅಗತ್ಯಗಳನ್ನು ಪಟ್ಟಿ ಮಾಡುವೆ.


ಚಿತ್ರದಲ್ಲಿರುವ ಮಕ್ಕಳು ಏನು ಮಾಡುತ್ತಿದ್ದಾರೆ? ಹೇಳು.















ಇಲ್ಲಿ ಕೆಲವು ವಸ್ತುಗಳ ಚಿತ್ರಗಳಿವೆ. ನಿನಗೆ ಬೇಕೇ ಬೇಕಾಗಿರುವ ವಸ್ತುಗಳಿಗೆ ಗೆರೆ ಎಳೆ.





ಹಸಿವಾಗುತ್ತಿದೆ,
ಊಟ
ಮಾಡೋಣವೆ?


ಅಯ್ಯೋ!
ಬಾಯಾರಿಕೆ
ಕುಡಿಯಲು ನೀರು
ಬೇಕು.


ಮಳೆ ಶುರುವಾಯಿತು,
ಮನೆಗೆ ಹೋಗೋಣ


ಚಳಿ, ಮಳೆ,
ಗಾಳಿ, ಬಿಸಿಲಿನ ತಾಪ
ತಪ್ಪಿಸಿಕೊಳ್ಳಲು ಬಟ್ಟೆ
ಬೇಕೇ ಬೇಕು.



ಉಸಿರಾಡಲು
ಗಾಳಿಯು ಬೇಕಲ್ಲವೆ?



ಎಲ್ಲರಿಗೂ ಗಾಳಿ, ನೀರು, ಆಹಾರ, ಬಟ್ಟೆ, ಮನೆ ಬೇಕೇ ಬೇಕು.
ಇವೇ ನಮ್ಮೆಲ್ಲರ ಮೂಲಭೂತ ಅಗತ್ಯಗಳು.





ಪ್ರಾಣಿಗಳಿಗೂ ಗಾಳಿ, ನೀರು ಮತ್ತು ಆಹಾರ ಬೇಕು.





ಸಸ್ಯಗಳಿಗೂ ಗಾಳಿ, ನೀರು ಮತ್ತು ಆಹಾರ ಬೇಕು.

ಚೌಕದಲ್ಲಿರುವ ಚಿತ್ರದಂತೆ ಗೆರೆಗಳನ್ನು ಅನುಸರಿಸಿ ಮನೆಯ ಚಿತ್ರ ಬರೆದು ಬಣ್ಣ ಹಾಕು.











ಚಿತ್ರ ನೋಡಿ ಸರಿ ಎನಿಸಿದ್ದಕ್ಕೆ (✓) ಗುರುತು ಹಾಕು.


ನಾನು ಕುಡಿಯುವ ನೀರು

☐   ☐


ನಾನು ತಿನ್ನುವ ಹಣ್ಣು

☐   ☐

ನಾನು ಇರುವ ಮನೆ

☐   ☐

ನಾನು ಹಾಕುವ ಬಟ್ಟೆ

☐   ☐


ಪಾಠ – 14


ಬಾನ ಗೆಳೆಯರು

ಈ ಪಾಠವನ್ನು ಕಲಿತ ನಂತರ ನೀನು,
- ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನು ಗುರುತಿಸುವೆ.

ನೀನು ಆಕಾಶ ನೋಡಿದ್ದೀಯಾ? ಆಕಾಶದಲ್ಲಿ ಏನನ್ನು ಕಾಣುತ್ತೇವೆ?

ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿ ಆಕಾಶದಲ್ಲಿ ಕಾಣುವ ವಸ್ತುಗಳಿರುವ ಚಿತ್ರಗಳಿಗೆ (✓) ಗುರುತು ಹಾಕು.





ಹಗಲಿನ ಆಕಾಶದಲ್ಲಿ ನಿನಗೇನು ಕಾಣುತ್ತದೆ? ತಿಳಿಸು. ರಾತ್ರಿಯ ಆಕಾಶದಲ್ಲಿ ನಿನಗೇನು ಕಾಣುತ್ತದೆ ಎನ್ನುವುದನ್ನು ಗೆಳೆಯ/ಗೆಳತಿಯರಿಗೆ ಹೇಳು.

ಚಿತ್ರ ನೋಡಿ ಹೇಳು

ಈಗ ಹಗಲು. ಆಕಾಶದಲ್ಲಿ ನಿನಗೇನು ಕಾಣುತ್ತದೆ?




ಸೂರ್ಯ ಮರೆಯಾದಾಗ ಏನಾಗುತ್ತದೆ? ಹೇಳು.

ರಾತ್ರಿ ಆಕಾಶದಲ್ಲಿ ಏನೇನು ಕಾಣುತ್ತವೆ?



ನಕ್ಷತ್ರಗಳು ಬಹಳ ದೂರ ಇರುವುದರಿಂದ ಚುಕ್ಕೆಗಳಂತೆ ಕಾಣುತ್ತವೆ.

ಈ ಚಿತ್ರಗಳನ್ನು ಗೆರೆ ಎಳೆದು ಹೊಂದಿಸು.



ಚಂದ್ರ



ನಕ್ಷತ್ರ




ಸೂರ್ಯ

ಆಟ ಆಡು.

- ತರಗತಿ ಕೋಣೆಯಲ್ಲಿ ವೃತ್ತ ಹಾಕಿ ಕೆಳಗೆ ತೋರಿಸಿದಂತೆ ಬರೆ.
- ಗೆಳೆಯರೆಲ್ಲ ಸೇರಿ ವೃತ್ತದ ಸುತ್ತ ಓಡಲು ಪ್ರಾರಂಭಿಸಿ.
- ಒಬ್ಬರು ಸೀಟಿ ಊದಲಿ. ಸೀಟಿ ಊದಿದಾಗ ಎಲ್ಲರೂ ನಿಲ್ಲಲಿ. ನಿಂತ ಜಾಗದಲ್ಲಿ ಬರೆದಿರುವ ಬಾನಿನ ಗೆಳೆಯರ ಹೆಸರನ್ನು ಒಬ್ಬೊಬ್ಬರೇ ಹೇಳಲಿ.



ಹಾಡಿ ನಲಿ




ಸೂರ್ಯ ಬಂದ ಬೆಳಕ ತಂದ
ಹಾಡಿ ಆಡಿ ನಲಿಯೋ ಕಂದ.
ಚಂದಿರ ಬಂದ ಬೆಳದಿಂಗಳ ತಂದ
ಜಿಗಿದು ಕುಣಿಯೋ ಮುದ್ದಿನ ಕಂದ.
ತಾರೆಗಳ ಎಣಿಕೆ ಎನಿತು ಚೆಂದ
ಪದವೊಂದನು ಹಾಡು ಮುದ್ದಿನ ಕಂದ.

ಹೊಳೆಯುವ ಮಿನುಗುವ ತಾರೆಗಳೇ
ನನ್ನಯ ಸಂಗಡ ಕುಣಿದಾಡಿ
ಬಾನಲಿ ಬೆಳಗುವ ದೀಪಗಳೇ
ನನಗೂ ಸ್ವಲ್ಪ ಹೊಳಪು ಕೊಡಿ.


ಹೀಗೆ ಮಾಡು


- ನಿನ್ನ ಗೆಳೆಯ/ಗೆಳತಿಯರೊಡನೆ ರಾತ್ರಿ ಆಕಾಶದಲ್ಲಿ ನಕ್ಷತ್ರಗಳನ್ನು ಎಣಿಸು.
- ಶಿಕ್ಷಕರು ಅಥವಾ ಹಿರಿಯರ ಸಹಾಯದಿಂದ ಸೂರ್ಯ, ಚಂದ್ರ, ನಕ್ಷತ್ರಗಳಿಗೆ ಇರುವ ಬೇರೆ ಬೇರೆ ಹೆಸರುಗಳನ್ನು ಕೇಳಿ ತಿಳಿದುಕೊ.

ಚುಕ್ಕೆ ಸೇರಿಸಿ ಬಣ್ಣ ಹಾಕು.



ಚಿತ್ರಗಳಿಗೆ ಬಣ್ಣ ಹಾಕು.







ಪಾಠ – 15

ನಮ್ಮ ಸುತ್ತ–ಮುತ್ತ

ಈ ಪಾಠವನ್ನು ಕಲಿತ ನಂತರ ನೀನು,
- ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ಪಡೆಯುವೆ.

ಕೆಳಗಿನ ಚಿತ್ರಗಳನ್ನು ಗಮನಿಸು. ಅವುಗಳ ಹೆಸರು ಹೇಳು. ಶಿಕ್ಷಕರ/ಹಿರಿಯರ ನೆರವು ಪಡೆ.
























ಕೆಳಗಿನ ಚಿತ್ರಗಳನ್ನು ನೋಡು, ಇವು ನಿನ್ನ ಊರಿನಲ್ಲಿ ಇವೆಯೆ? ಇದ್ದರೆ (✓) ಗುರುತು ಹಾಕು. ಇಲ್ಲದಿದ್ದರೆ (x) ಗುರುತು ಹಾಕು.

ಕ್ರ.ಸಂ.	ನಿನ್ನ ಊರಿನಲ್ಲಿ	ಇದೆ	ಇಲ್ಲ
1.			
2.			
3.			
4.			

5.			
6.			
7.			
8.			
9.			

ನಿನ್ನ ಊರಿನ ಸುತ್ತ–ಮುತ್ತ ಏನಿವೆ? ಶಿಕ್ಷಕರು ಅಥವಾ ಹಿರಿಯರ ಜೊತೆ ಚರ್ಚಿಸು.

ಈ ಚಿತ್ರಕ್ಕೆ ಬಣ್ಣ ತುಂಬಿ, ಆನಂದಿಸು.



ಹಾಡಿ ನಲಿ

ಬಾರೋ ತಮ್ಮ ಬಾರೇ ತಂಗಿ,
ಹಾಡನು ಹಾಡೋಣ;
ಸುತ್ತ ಮುತ್ತ ಏನೇನಿರುವುದು,
ಎಂಬುದ ತಿಳಿಯೋಣ.

ಬಂದಿತು ನೋಡು ಪೊಂವ್ ಪೊಂವ್ ಬಸ್ಸು,
ಶಬ್ದವ ಮಾಡುತ ರಸ್ತೆಯ ಸುತ್ತು;
ಶಾಲೆಯ ಮುಂದೆ ಸಾಗುತ ಗತ್ತು
ಹೊರಟಿತು ಬಸ್ಸು ಜನರನು ಹೊತ್ತು.

ನೋಡಲು ಚೆಂದ ತುಂಬಿದ ಕೆರೆಯು,
ಹೊಲ–ಗದ್ದೆಗಳ ಹಸಿರಿನ ಚೆಲುವು;
ಬದುವಿನ ಮೇಲೆ ನಡೆಯುವ ಜನರು,
ತುಂಬಿದ ಬೆಳೆಗೆ ಸಂಭ್ರಮ ಜೋರು.

ಊರಿನ ಸುತ್ತಲೂ ಏನಿದೆ ನೋಡು,
ಚಂದದ ನದಿಯು ಹರಿಯುವ ಜಾಡು;
ಬೆಟ್ಟದ ಬುಡದಲಿ ಬೆಳೆದಿದೆ ಕಾಡು,
ಅಂದದ, ಹಸಿರಿನ ಮರಗಳ ಬೀಡು.

ಮರಗಳ ಮೇಲೆ ಹಕ್ಕಿಯ ಗೂಡು,
ಕೊಂಬೆಯ ಮೇಲೆ ಮಂಗನ ನೋಡು;
ಬಳುಕುವ ಬಾಗುವ ತೆನೆಗಳ ಹಾಡು,
ಸುಂದರ ಪರಿಸರ ನನ್ನಯ ನಾಡು.

ಶಿಕ್ಷಕರು ಅಥವಾ ಹಿರಿಯರೊಡನೆ ನಿನ್ನ ಊರಿನ ಸುತ್ತ ಮುತ್ತಲಿನ ಸ್ಥಳಗಳಿಗೆ ಭೇಟಿ ನೀಡು. ಅಲ್ಲಿ ನೀನು ಏನೇನು ನೋಡಿದೆ ಎನ್ನುವುದನ್ನು ಗೆಳೆಯ, ಗೆಳತಿಯರಿಗೆ ಹೇಳು.